ದಿನಾಂಕ 18-3-2013 ರಂದು ಬಹುಮಹಡಿಗಳ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ
ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಹದಿಮೂರನೇಯ ಸಭೆಯ ನಡುವಳಿಗಳು:

ಉಪಸ್ಥಿತರಿದ್ದ ಸದಸ್ಯರು:

| | | |
|---|---|---|
| 1. | ಡಾ. ಬಿ.ವಿ. ಪಾಟೀಲ | ಅಧ್ಯಕ್ಷರು |
| 2. | ಶ್ರೀ ಭರತ್‌ಲಾಲ್ ಮೀನಾ | ಸದಸ್ಯರು |
| 3. | ಶ್ರೀ ಶಂಕರಲಿಂಗೇಗೌಡ | ಸದಸ್ಯರು |
| 4. | ಶ್ರೀ ಚಂದ್ರಶೇಖರ | ಸದಸ್ಯರು |
| 5. | ಶ್ರೀಮತಿ ಮಂಜುಳ ಗೀತಾ | ಸದಸ್ಯರು |
| 6. | ಶ್ರೀ ಅಲ್ಲಮಪ್ರಭು ಪಾಟೀಲ | ಸದಸ್ಯರು |
| 7. | ಶ್ರೀಮತಿ ಹೆಚ್.ಸಿ. ಆಶಾ ಶೇಷಾದ್ರಿ | ಸದಸ್ಯರು |
| 8. | ಶ್ರೀ ಬಸವರಾಜ ಪಾಟೀಲ್ ಇಟಗಿ | ಸದಸ್ಯರು |
| 9. | ಶ್ರೀ ವೆಂಕನಗೌಡ ಮಲ್ಕಾಪುರ | ಸದಸ್ಯರು |
| 10. | ಶ್ರೀ ಶಂಕರಗೌಡ ಹರವಿ | ಸದಸ್ಯರು |
| 11. | ಶ್ರೀ ಭೋಜನಗೌಡ | ಸದಸ್ಯರು |
| 12. | ಶ್ರೀ ಶಿವಪ್ಪ ಬಿ. ಬಲ್ಲಿದವ | ಸದಸ್ಯರು |
| 13 | ಶ್ರೀ ಹನುಮೇಶ ನಾಯಕ | ಸದಸ್ಯರು |
| 14 | ಶ್ರೀ ಜಿ. ತಿಮ್ಮನಗೌಡ ಪಾಟೀಲ್ | ಸದಸ್ಯರು |
| 15 | ಡಾ. ಎಸ್.ಜಿ. ಪಾಟೀಲ | ಸದಸ್ಯರು |
| 16 | ಡಾ. ಡಿ.ಪಿ. ಬಿರಾದಾರ | ಸದಸ್ಯ-ಕಾರ್ಯದರ್ಶಿ |

ಪ್ರಾರಂಭದಲ್ಲಿ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹದಿಮೂರನೇಯ ಸಭೆಗೆ ಸರ್ವಸದಸ್ಯರನ್ನು ಮಾನ್ಯ ಕುಲಪತಿಗಳು ಹಾಗೂ ಅಧ್ಯಕ್ಷರು ಸ್ವಾಗತ ಕೋರಿದರು. ತದನಂತರ, ಕಾರ್ಯಸೂಚಿಯ ವಿಷಯವಾರು ಪ್ರಕಾರ ಒಂದೊಂದಾಗಿ ಚರ್ಚಿಸಿ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

| | |
|---|---|
| **ಅನುಕ್ರಮ ಸಂ: 1** | **ದಿನಾಂಕ 16-11-2012 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹನ್ನೆರಡನೇಯ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು ಮತ್ತು ಅವುಗಳ ಪ್ರಕಾರ ಕೈಗೊಂಡ ಕ್ರಮಗಳನ್ನು ಅನುಮೋದಿಸುವುದು** |

**ಠರಾವು:**

ವಿಸ್ತೃತವಾದ ಚರ್ಚೆಯ ನಂತರ, ದಿನಾಂಕ 16-11-2012 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹನ್ನೆರಡನೇಯ ಸಭೆಯ ನಡುವಳಿಕೆಗಳಲ್ಲಿಯ ಅನುಕ್ರಮ ಸಂ.2 ರ ಅನ್ವಯ ಮಾನ್ಯ ಸದಸ್ಯರುಗಳ ದಿನಾಂಕಗಳನ್ನು 2013 ರ ಏಪ್ರೀಲ್ 7 ರಿಂದ 14 ರವರೆಗೆ ಪುನರ್-ನಿಗದಿಗೊಳಿಸಿರುವುದನ್ನು ಹೊರತುಪಡಿಸಿ ಉಳಿದೆಲ್ಲ ನಡುವಳಿಕೆಗಳನ್ನು ಓದಲಾಯಿತೆಂದು ಪರಿಗಣಿಸಿ, ಸ್ಥಿರೀಕರಿಸಲಾಯಿತು. ಅನುಕ್ರಮ ಸಂ.5 ನ್ನು ಸ್ಥಿರೀಕರಿಸುವಾಗ, ಕೃವಿವಿ ಬೆಂಗಳೂರು ಮತ್ತು ಧಾರವಾಡದಲ್ಲಿರುವ ಹಾಗೆ, ಕೃವಿವಿ ರಾಯಚೂರಿಗೆ ಸೂಕ್ತ ಲೆಕ್ಕ ಪರಿಶೋದಕರನ್ನು ನೇಮಕ ಮಾಡುವಂತೆ ಕರ್ನಾಟಕ ರಾಜ್ಯ ಲೆಕ್ಕಪರಿಶೋಧಕರಿಗೆ ಪತ್ರ ಬರೆಯಲು ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಹಾಗೂ ಪ್ರಧಾನ ಕಾರ್ಯದರ್ಶಿಗಳು (ತೋಟಗಾರಿಕೆ), ಕರ್ನಾಟಕ ಸರಕಾರ ಅವರುಗಳು ಸಲಹೆ ನೀಡಿದರು. ಮುಂದುವರೆದು, ಪ್ರಸ್ತುತ ಲಭ್ಯವಿರುವ ಉಪ-ಹಣಕಾಸು ನಿಯಂತ್ರಣಾಧಿಕಾರಿಗಳ ಒಂದು ಹುದ್ದೆಯನ್ನು ತಕ್ಷಣವೇ ಕೃವಿವಿ ರಾಯಚೂರಿಗೆ ವರ್ಗಾಯಿಸುವಂತೆ ಪತ್ರ ಬರೆಯಲು ಸಹ ಪ್ರಧಾನ ಕಾರ್ಯದರ್ಶಿಗಳವರುಗಳು ಸಲಹೆ ನೀಡಿದರು. ಕೃವಿವಿ ಧಾರವಾಡದಿಂದ ಎರವಲು ಸೇವೆ ಮೇಲೆ ಬಂದಂತಹ ಶ್ರೀ ಎ.ಎಸ್. ಪಾಟೀಲ್ ಅವರು ಕೃವಿವಿ ರಾಯಚೂರಿನ ಹಣಕಾಸು ನಿಯಂತ್ರಣಾಧಿಕಾರಿಗಳಾಗಿ ದಿನಾಂಕ 30-6-2013 ರ ವರೆಗೆ ಮುಂದುವರೆಯಲು ಪ್ರಧಾನ ಕಾರ್ಯದರ್ಶಿಗಳವರುಗಳು ಒಪ್ಪಿಗೆ ಸೂಚಿಸಿದರು. ಮುಂದುವರೆದು, ಅವುಗಳ ಪ್ರಕಾರ ಕೈಕೊಂಡ ಕ್ರಮಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

| ಅನುಕ್ರಮ ಸಂ: 2 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ 1-4-2006 ನಂತರದಲ್ಲಿ ಸೇವೆಗೆ ಹಾಜರಾದ ಸಿಬ್ಬಂದಿಯವರಿಗೆ ಈ ಹಿಂದೆ ಸಲ್ಲಿಸಿದ ಸೇವೆಯನ್ನು ಪಿಂಚಣಿ ಉದ್ದೇಶಕ್ಕಾಗಿ ಪರಿಗಣಿಸುವ ಕುರಿತು. |
|---|---|

**ಠರಾವು:**

ಸುದೀರ್ಘ ಚರ್ಚೆಯ ನಂತರ, ಈ ಕುರಿತು ಕರ್ನಾಟಕ ಸರಕಾರವು ಇತ್ತೀಚೆಗೆ ಹೊರಡಿಸಿದ ಸ್ಪಷ್ಟೀಕರಣಗಳನ್ನು ಗಮನದಲ್ಲಿಟ್ಟುಕೊಳ್ಳುವ ಸಲಹೆಯೊಂದಿಗೆ ಸದರಿ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಸರಕಾರದ ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಅವರು ನೀಡಿದ ಸ್ಪಷ್ಟೀಕರಣದನ್ವಯ, ಕರ್ನಾಟಕ ಸರಕಾರದ ಇಲಾಖೆಗಳಲ್ಲಿ ಸೇವೆ ಸಲ್ಲಿಸಿದ ಸಿಬ್ಬಂದಿಯವರ ಪಿಂಚಣಿ ಅಂಶದಾನದ ಹಣವನ್ನು ನೀಡಲಾಗುವುದಿದಲ್ಲ ಎಂಬುದಾಗಿರುತ್ತದೆ. ಅಲ್ಲದೆ, **ಪಿಂಚಣಿ ಯೋಜನೆಯನ್ನು ಅನುಸರಿಸುವ ಇತರೇ ಸಂಸ್ಥೆಗಳಲ್ಲಿ** ಸೇವೆ ಸಲ್ಲಿಸಿದ ಸಿಬ್ಬಂದಿಯವರು, ಸಿಬ್ಬಂದಿಯಾಗಲೀ ಅಥವಾ ಉದ್ಯೋಗದಾತರಾಗಲೀ ಪಿಂಚಣಿ ಅಂಶವನ್ನು **ಪ್ರೋರಾಟ** ಆಧಾರದ ಮೇಲೆ ನೀಡಿದಲ್ಲಿ ಮಾತ್ರ ಈ ಸೌಲಭ್ಯವನ್ನು ಪಡೆಯಲು ಅರ್ಹರಾಗುತ್ತಾರೆ. (ಕ್ರಮ : ಕುಲಸಚಿವರು)

| ಅನುಕ್ರಮ ಸಂ: 3 | **ಡಾ. ಎ.ಸಿ. ಸುಧಾಕರ, ಸಹಾಯಕ ಪ್ರಾಧ್ಯಾಕರು (ಮೀನುಗಾರಿಕೆ), ಮುಖ್ಯ ಕೃಷಿ ಸಂಶೋಧನಾ ಕೇಂದ್ರ ರಾಯಚೂರು ಅವರ ವೈದ್ಯಕೀಯ ವೆಚ್ಚ ಮರುಪಾವತಿ ಕುರಿತು** |
|---|---|

**ಠರಾವು:**

ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಸದರಿ ಪ್ರಸ್ತಾವನೆಯನ್ನು ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು. (ಕ್ರಮ : ಕುಲಸಚಿವರು / ಹಣಕಾಸು ನಿಯಂತ್ರಾಧಿಕಾರಿಗಳು)

| ಅನುಕ್ರಮ ಸಂ: 4 | **ಅಂತರರಾಷ್ಟ್ರೀಯ ತರಬೇತಿ / ಕಾರ್ಯಾಗಾರಗಳಲ್ಲಿ / ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಪ್ರಬಂಧಗಳನ್ನು ಮಂಡಿಸಲು / ಪ್ರಯೋಗಾಲಯಗಳಿಗೆ ಭೇಟಿ ನೀಡಲು ಶಿಕ್ಷಕರು / ವಿಜ್ಞಾನಿಗಳಿಗೆ ವಿದೇಶಗಳಿಗೆ ಪ್ರತಿನಿಯೋಜನೆ ಮಾಡುವ ಕುರಿತು.** |
|---|---|

**ಠರಾವು:**

ಅಂತರರಾಷ್ಟ್ರೀಯ ತರಬೇತಿ / ಕಾರ್ಯಾಗಾರಗಳಲ್ಲಿ / ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಪ್ರಬಂಧಗಳನ್ನು ಮಂಡಿಸಲು / ಪ್ರಯೋಗಾಲಯಗಳಿಗೆ ಭೇಟಿ ನೀಡಲು ಕೃವಿವಿ ಯ ಶಿಕ್ಷಕರು / ವಿಜ್ಞಾನಿಗಳಿಗೆ ವಿದೇಶಗಳಿಗೆ ವಿಶ್ವವಿದ್ಯಾಲಯವು ಪ್ರತಿನಿಯೋಜನೆ ಮಾಡಿದ ವಿಷಯಗಳನ್ನು ಪ್ರಸ್ತಾಪಿಸಿದಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಿದ್ದು ಈ ಕುರಿತು ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.

(ಕ್ರಮ : ಕುಲಸಚಿವರು)

| ಅನುಕ್ರಮ ಸಂ: 5 | **ಕೊಪ್ಪಳ ಜಿಲ್ಲೆ ಗಂಗಾವತಿಯಲ್ಲಿಯ ಕೃಷಿ ಸಂಶೋಧನಾ ಕೇಂದ್ರದಲ್ಲಿ ಕೃಷಿ ಮಹಾವಿದ್ಯಾಲಯವನ್ನು ಪ್ರಾರಂಭಿಸುವ ಕುರಿತು.** |
|---|---|

**ಠರಾವು:**

ವಿಸ್ತೃತ ಚರ್ಚೆಯ ನಂತರ, ಅವಶ್ಯಕವಿರುವ ಅನುದಾನವನ್ನು ಕರ್ನಾಟಕ ಸರಕಾರವು ಬಿಡುಗಡೆಗೊಳಿಸಿದಲ್ಲಿ 2013-14 ನೇ ಸಾಲಿನಿಂದ ಕಾಲೇಜು ಪ್ರಾರಂಭಿಸುವ ಸಲಹೆಯೊಂದಿಗೆ ಸದರಿ ಪ್ರಸ್ತಾವನೆಗೆ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. (ಕ್ರಮ : ಕುಲಸಚಿವರು)

| ಅನುಕ್ರಮ ಸಂ: 6 | **ಸಿ.ಎ.ಎಸ್.96 ಯೋಜನೆಯಡಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕರ ಪದೋನ್ನತಿ ಕುರಿತು** |
|---|---|

**ಠರಾವು:**

ಡಾ. ಜೆ.ಆರ್. ಪಾಟೀಲ್ ಮತ್ತು ಡಾ. ಎಸ್.ಎಸ್. ಪಾಟೀಲ್ ಅವರುಗಳಿಗೆ ಸಿ.ಎ.ಎಸ್.96 ಯೋಜನೆಯಡಿ ಸಹ-ಪ್ರಾಧ್ಯಾಪಕರ ಹುದ್ದೆಯಿಂದ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡುವ ಪ್ರಸ್ತಾವನೆಗೆ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. (ಕ್ರಮ : ಕುಲಸಚಿವರು)

| ಅನುಕ್ರಮ ಸಂ: 7 | ಶಿಕ್ಷಕರ ನೇರ ನೇಮಕಾತಿಗಾಗಿ ಹಾಗೂ ಸಿ.ಎ.ಎಸ್.–2006 ರ ಅಡಿ ಪದೋನ್ನತಿಗಾಗಿ ನಿಯಮಾವಳಿಗಳು ಕುರಿತು |
|---|---|

**ಠರಾವು:**

ದೀರ್ಘ ಚರ್ಚೆಯ ನಂತರ, ಪ್ರಸ್ತಾಪಿಸಲಾದ ವಿಷಯಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು ಮತ್ತು ಸದರಿ ನಿಯಮಾವಳಿಗಳು ಕೃಷಿ ವಿಶ್ವವಿದ್ಯಾಲಯ ಧಾರವಾಡದಲ್ಲಿರುವಂತಿರಬೇಕೆಂದು ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಹಾಗೂ ಪ್ರಧಾನ ಕಾರ್ಯದರ್ಶಿಗಳು (ತೋಟಗಾರಿಕೆ), ಕರ್ನಾಟಕ ಸರಕಾರ ಅವರುಗಳು ತಿಳಿಯಪಡಿಸಿದರು. ಸಿ.ಎ.ಎಸ್.–2006 ರ ಅಡಿ ಪದೋನ್ನತಿಗಾಗಿ ನಿಯಮಾವಳಿಗಳು ಕಲಂ 371(ಜೆ) ರ ಅಡಿ ಮಾಡಲಾದ ನಿಯಮಾವಳಿಗಳನ್ನು ಮೀರತಕ್ಕದಲ್ಲ ಎಂದು ಸಲಹೆ ನೀಡಿದರು. (ಕ್ರಮ : ಕುಲಸಚಿವರು)

| ಅನುಕ್ರಮ ಸಂ: 8 | **ಕೃಷಿ ಸಂಶೋಧನಾ ಕೇಂದ್ರ ಸಿರುಗುಪ್ಪಾದಲ್ಲಿರುವ ಎ.ಐ.ಸಿ.ಆರ್.ಪಿ. ಆನ್ ಹತ್ತಿ ಯೋಜನೆಯನ್ನು ಮುಖ್ಯ ಕೃಷಿ ಸಂಶೋಧನಾ ಕೇಂದ್ರ ರಾಯಚೂರಿಗೆ ಸ್ಥಳಾಂತರಿಸುವ ಕುರಿತು.** |
|---|---|

**ಠರಾವು:**

ಚರ್ಚೆಯ ನಂತರ, ಕೃಷಿ ಸಂಶೋಧನಾ ಕೇಂದ್ರ ಸಿರುಗುಪ್ಪಾದಲ್ಲಿರುವ ಎ.ಐ.ಸಿ.ಆರ್.ಪಿ. ಆನ್ ಹತ್ತಿ ಯೋಜನೆಯನ್ನು ಮುಖ್ಯ ಕೃಷಿ ಸಂಶೋಧನಾ ಕೇಂದ್ರ ರಾಯಚೂರಿಗೆ ತಕ್ಷಣದಿಂದಲೇ ಜಾರಿಗೆ ಬರುವಂತೆ ಸ್ಥಳಾಂತರಿಸಲು ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. (ಕ್ರಮ : ಕುಲಸಚಿವರು / ಸಂಶೋಧನಾ ನಿರ್ದೇಶಕರು)

| ಅನುಕ್ರಮ ಸಂ: 9 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮೂರನೇಯ ಘಟಿಕೋತ್ಸವದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಸ್ನಾತಕ ಪದವಿಗಳ ಪ್ರದಾನ ಕುರಿತು** |
|---|---|

**ಠರಾವು:**

ಚರ್ಚೆಯ ನಂತರ, ಅರ್ಹ ಅಭ್ಯರ್ಥಿಗಳಿಗೆ ಸ್ನಾತಕ ಪದವಿಗಳನ್ನು ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮೂರನೇಯ ಘಟಿಕೋತ್ಸವದಲ್ಲಿ ಪ್ರದಾನ ಮಾಡಲು ಘನ ವೇದಿಕೆಯು ಅನುಮೋದನೆ ನೀಡಿತು.(ಕ್ರಮ: ಕುಲಸಚಿವರು)

| ಅನುಕ್ರಮ ಸಂ: 10 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮೂರನೇಯ ಘಟಿಕೋತ್ಸವದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿಗಳ ಪ್ರದಾನ ಕುರಿತು** |
|---|---|

**ಠರಾವು:**

ಚರ್ಚೆಯ ನಂತರ, ಅರ್ಹ ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿಗಳನ್ನು ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮೂರನೇಯ ಘಟಿಕೋತ್ಸವದಲ್ಲಿ ಪ್ರದಾನ ಮಾಡಲು ಘನ ವೇದಿಕೆಯು ಅನುಮೋದನೆ ನೀಡಿತು.(ಕ್ರಮ: ಕುಲಸಚಿವರು)

| ಅನುಕ್ರಮ ಸಂ: 11 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮೂರನೇಯ ಘಟಿಕೋತ್ಸವದಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ಬಂಗಾರದ ಪದಕ ಮತ್ತು ನಗದು ಬಹುಮಾನ/ಬಹುಮಾನಗಳನ್ನು ನೀಡುವ ಕುರಿತು** |
|---|---|

**ಠರಾವು:**

ದೀರ್ಘ ಚರ್ಚೆಯ ನಂತರ, 9 ಕೃವಿವಿ ಬಂಗಾರದ ಪದಕಗಳನ್ನು ಅರ್ಹ ಸ್ನಾತಕೋತ್ತರ ಅಭ್ಯರ್ಥಿಗಳಿಗೆ ಹಾಗೂ 3 ಕೃವಿವಿ ಬಂಗಾರದ ಪದಕಗಳನ್ನು, 13 ಖಾಸಗಿ–ವೈಯಕ್ತಿಕ / ಏಜೆನ್ಸಿ ಯ ಬಂಗಾರದ ಪದಕಗಳು, 2 ಖಾಸಗಿ ನಗದು ಬಹುಮಾನ / ಬಹುಮಾನಗಳನ್ನು ವಿಶ್ವವಿದ್ಯಾಲಯದ ವಿವಿಧ ಮಹಾವಿದ್ಯಾಲಯಗಳಲ್ಲಿಯ ಅರ್ಹ ಅಭ್ಯರ್ಥಿಗಳಿಗೆ ನೀಡಲು ಘನ ವೇದಿಕೆಯು ಅನುಮೋದನೆ ನೀಡಿತು. (ಕ್ರಮ : ಕುಲಸಚಿವರು)

| ಅನುಕ್ರಮ ಸಂ: 12 | **ಅತ್ಯುತ್ತಮ ಬೋಧಕ / ವಿಜ್ಞಾನಿಗಳು ಮತ್ತು ಸೇವಾ ಸಿಬ್ಬಂದಿ / ಸಂಶೋಧನಾ ಕೇಂದ್ರ ಹಾಗೂ ಸಂಶೋಧನಾ ಯೋಜನೆಗಳನ್ನು ಪಡೆಯುವ ವಿಜ್ಞಾನಿಗಳಿಗೆ ಪ್ರೋತ್ಸಾಹ ಧನ / ಅತ್ಯುತ್ತಮ ರೈತ ವಿಜ್ಞಾನಿ ಪ್ರಶಸ್ತಿಗಳನ್ನು ಹಾಗೂ ಪ್ರೋತ್ಸಾಹ ಧನ ಪಡೆಯುವವರ ಯಾದಿಗೆ ಅನುಮೋದನೆ ಕುರಿತು** |
|---|---|

**ಠರಾವು:**

ವಿಸ್ತೃತ ಚರ್ಚೆಯ ನಂತರ, ಅತ್ಯುತ್ತಮ ಬೋಧಕ / ವಿಜ್ಞಾನಿಗಳು ಮತ್ತು ಸೇವಾ ಸಿಬ್ಬಂದಿ / ಸಂಶೋಧನಾ ಕೇಂದ್ರ ಹಾಗೂ ಸಂಶೋಧನಾ ಯೋಜನೆಗಳನ್ನು ಪಡೆಯುವ ವಿಜ್ಞಾನಿಗಳಿಗೆ ಪ್ರೋತ್ಸಾಹ ಧನ ಪಡೆಯುವವರ ಯಾದಿಗೆ

ಘನ ವೇದಿಕೆಯು ಅನುಮೋದನೆ ನೀಡಿತು. ಆದರೆ ಎರಡೂ ರೈತರುಗಳ ಕ್ಷೇತ್ರಗಳಿಗೆ ಸಮಿತಿಯು ದಿನಾಂಕ 23-3-2013 ರಂದು ಭೇಟಿ ನೀಡಿದ ನಂತರ ಅತ್ಯುತ್ತಮ ರೈತ ವಿಜ್ಞಾನಿ ಪ್ರಶಸ್ತಿಗಳನ್ನು ಅಂತಿಮಗೊಳಿಸಲಾಗುವುದು.

(ಕ್ರಮ : ಕುಲಸಚಿವರು)

| ಅನುಕ್ರಮ ಸಂ: 13 | **ನೈಸರ್ಗಿಕ ಆಕಳು ಕೃಷಿ ಯೋಜನೆಯ ಬಗ್ಗೆ ಅಧ್ಯಕ್ಷರ ವರದಿ ಸಲ್ಲಿಸುವ ಕುರಿತು.** |
|---|---|

**ಠರಾವು:**

ನೈಸರ್ಗಿಕ ಆಕಳು ಕೃಷಿ ಯೋಜನೆಯ ಅಧ್ಯಯನ ಕುರಿತಾಗಿ ರಚಿಸಿದ ಸಮಿತಿಯ ಅಧ್ಯಕ್ಷರ ವರದಿಯನ್ನು ದೀರ್ಘವಾಗಿ ಚರ್ಚಿಸಲಾಯಿತು ಹಾಗೂ ಸದರಿ ವರದಿಯನ್ನು ಸಲ್ಲಿಸುವಾಗ ಸಮಿತಿಯ ಅಧ್ಯಕ್ಷರು ಇತರೇ ಸದಸ್ಯರ ಅಭಿಪ್ರಾಯ ಮತ್ತು ವಿಶ್ವಾಸವನ್ನು ಪಡೆದಿರುವುದಿಲ್ಲವೆಂದು ಸದಸ್ಯರುಗಳು ಆಕ್ಷೇಪವನ್ನು ವ್ಯಕ್ತಪಡಿಸಿದರು. ಸದರಿ ವರದಿಯನ್ನು ಪುನರಾವಲೋಕಿಸಿ ಸಮಿತಿಯ ಎಲ್ಲಾ ಸದಸ್ಯರಿಗೆ ವಿವರವಾಗಿ ತಿಳಿಯಪಡಿಸಿ, ಅವರುಗಳ ಸಹಿ ಪಡೆದ ನಂತರ ಅಧ್ಯಕ್ಷರಿಗೆ ಪುನ: ವರದಿ ಸಲ್ಲಿಸಲು ಸಲಹೆ ನೀಡಲಾಯಿತು. (ಕ್ರಮ: ಕುಲಸಚಿವರು/ಸಂಶೋಧನಾ ನಿರ್ದೇಶಕರು)

| ಅನುಕ್ರಮ ಸಂ: 14 | **ಬ್ಯಾಕ್‌ಲಾಗ್ ಹುದ್ದೆಗಳಿಗೆ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ಅನುಮೋದನೆ ಕುರಿತು.** |
|---|---|

**ಠರಾವು:**

ಸದರಿ ಪ್ರಸ್ತಾವನೆಗೆ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು ಹಾಗೂ ಸಂಬಂಧಪಟ್ಟ ಅಭ್ಯರ್ಥಿಗಳಿಗೆ ವಿಶ್ವವಿದ್ಯಾಲಯವು ಈ ಕುರಿತು ನೇಮಕಾತಿ ಆದೇಶಗಳನ್ನು ಹೊರಡಿಸುವುದು. (ಕ್ರಮ : ಕುಲಸಚಿವರು)

| ಅನುಕ್ರಮ ಸಂ: 15 | **ಲಿಂಗಸೂಗೂರಿನ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಸ್ಥಾಪಿಸಲು ಸರ್ವೆ ನಂ. 189/1 ರಲ್ಲಿ 60 x 60' ಭೂಮಿಯನ್ನು ಪಡೆಯುವ ಕುರಿತು.** |
|---|---|

**ಠರಾವು:**

ಲಿಂಗಸೂಗೂರಿನ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ಕಚೇರಿ ಕಟ್ಟಡ ಕಟ್ಟುವ ಪ್ರಸ್ತಾವನೆಗೆ ಘನ ವೇದಿಕೆಯು ಅನುಮೋದನೆ ನೀಡಿತು. ಈ ಕುರಿತು ಕಂದಾಯ ಇಲಾಖೆಗೆ ಧನ್ಯವಾದಗಳನ್ನರ್ಪಿಸುವ ಪತ್ರವನ್ನು ಬರೆಯಲು ಘನ ವೇದಿಕೆಯು ಸಲಹೆ ನೀಡಿತು. (ಕ್ರಮ : ಕುಲಸಚಿವರು)

| ಅನುಕ್ರಮ ಸಂ: 16 | **ಹೂವಿನಹಡಗಲಿಯ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಸ್ಥಾಪಿಸಲು ಸರ್ವೆ ನಂ. 190/A1, 190/B2 ಮತ್ತು 190/B3(A) ರಲ್ಲಿ 5 ಎಕರೆ ಭೂಮಿಯನ್ನು ಪಡೆಯುವ ಕುರಿತು.** |
|---|---|

**ಠರಾವು:**

ಹೂವಿನಹಡಗಲಿಯ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ಕಚೇರಿ ಕಟ್ಟಡ ಕಟ್ಟುವ ಪ್ರಸ್ತಾವನೆಗೆ ಘನ ವೇದಿಕೆಯು ಅನುಮೋದನೆ ನೀಡಿತು. ಈ ಕುರಿತು ಕಂದಾಯ ಇಲಾಖೆಗೆ ಧನ್ಯವಾದಗಳನ್ನರ್ಪಿಸುವ ಪತ್ರವನ್ನು ಬರೆಯಲು ಘನ ವೇದಿಕೆಯು ಸಲಹೆ ನೀಡಿತು. (ಕ್ರಮ : ಕುಲಸಚಿವರು)

| ಅನುಕ್ರಮ ಸಂ: 17 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸಿಬ್ಬಂದಿಯವರ ಪಿಂಚಣಿ ಅಂಶದಾನವನ್ನು ಕೃಷಿ ವಿಶ್ವವಿದ್ಯಾಲಯ ಧಾರವಾಡವು ಇತ್ಯರ್ಥಪಡಿಸಿ ವರ್ಗಾಯಿಸುವ ಕುರಿತು.** |
|---|---|

**ಠರಾವು:**

ಸದರಿ ವಿಷಯವನ್ನು ಸುದೀರ್ಘವಾಗಿ ಚರ್ಚಿಸಿದ ನಂತರ, ಎಲ್ಲಾ 124 ಸಿಬ್ಬಂದಿಯವರ ಬಡ್ಡಿ ಸಮೇತ ಪಿಂಚಣಿ ಹಣ ಹಾಗೂ 50 ಶಿಕ್ಷಕರುಗಳ ಟೈರ್-1 ಮತ್ತು ಟೈರ್-2 ಅಂಶದಾನದ ಹಣವನ್ನು ಕೃಷಿ ವಿಶ್ವವಿದ್ಯಾಲಯ ರಾಯಚೂರಿಗೆ ಕೂಡಲೇ ವರ್ಗಾಯಿಸುವಂತೆ ಕೋರಿ ಪತ್ರ ಬರೆಯುವಂತೆ ವ್ಯವಸ್ಥಾಪನಾ ಮಂಡಳಿಯು ಸರ್ವಾನುಮತದಿಂದ ಸಲಹೆ ನೀಡಿತು. ಈ ಕುರಿತು ಕೃಷಿ ವಿಶ್ವವಿದ್ಯಾಲಯ, ಧಾರವಾಡಕ್ಕೆ ಸೂಕ್ತ ನಿರ್ದೇಶನ ನೀಡುವುದಾಗಿ ಸರಕಾರದ ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಅವರು ತಿಳಿಸಿದರು. (ಕ್ರಮ : ಕುಲಸಚಿವರು)

| ಅನುಕ್ರಮ ಸಂ: 18 | ಐದು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಲು ಅನುಮೋದನೆ ಕುರಿತು. |
|---|---|

**ಠರಾವು:**

ಕ್ರಮ ಸಂ. 1 ರಿಂದ 26 ರ ವರೆಗೆ ಪ್ರಸ್ತಾಪಿಸಿದ ಐದು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ ಉಪಕರಣಗಳೆಲ್ಲವನ್ನು ಖರೀದಿಸಲು ಘನ ವೇದಿಕೆಯು ಅನುಮೋದನೆ ನೀಡಿತು.

(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು / ಸರಕು ಖರೀದಿ ಅಧಿಕಾರಿಗಳು)

| ಅನುಕ್ರಮ ಸಂ: 19 | ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು. |
|---|---|

**ಠರಾವು:**

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿದ ಆವರಣಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಪ್ಸ್ತಾಪಿಸಿದಂತೆ ಘನ ವೇದಿಕೆಯು ಅನುಮೋದನೆ ನೀಡಿತು.

(ಕ್ರಮ : ಕಾರ್ಯನಿರ್ವಾಹಕ ಅಭಯಂತರರು)

| ಅನುಕ್ರಮ ಸಂ: 20 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.** |
|---|---|

**ಠರಾವು:**

ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳುವ ಪ್ರಸ್ತಾವನೆಗೆ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಅದರಂತೆ, ಕಡಿಮೆ ದರ ನಮೂದಿಸಿದ ಬಿಡ್ಡುದಾರರಿಗೆ ಪ್ರತ್ಯೇಕವಾಗಿ ಸಿವಿಲ್ ಕಾಮಗಾರಿ ಆದೇಶಗಳನ್ನು ನೀಡಲು ಸಹ ವ್ಯವಸ್ಥಾಪನಾ ಮಂಡಳಿಯು ಒಪ್ಪಿಗೆ ನೀಡಿತು. ಆದಾಗ್ಯೂ, ನಿಗದಿತ ದರಕ್ಕಿಂತತ ಕಡಿಮೆ ದರ ನಮೂದಿಸಿದ ಬಿಡ್ಡುದಾರರುಗಳು ಗುಣಮಟ್ಟದ ಕಾರ್ಯ ಕೈಗೊಳ್ಳುತ್ತಾರೆಯೇ ಎಂಬ ಬಗ್ಗೆ ಸರಕಾರದ ಪ್ರಧಾನ ಕಾರ್ಯದರ್ಶಿಗಳವರುಗಳು ಸಂಶಯವನ್ನು ವ್ಯಕ್ತಪಡಿಸಿದರು. ಇಂತಹ ಸಂದರ್ಭಗಳಲ್ಲಿ, ಗುಣವತ್ತತೆಯನ್ನು ಕಾಪಾಡುವ ಉದ್ದೇಶದಿಂದ ಹೆಚ್ಚಿನ ನಿಗಾ ವಹಿಸಲು ಸಲಹೆ ನೀಡಿದರು. (ಕ್ರಮ : ಕಾರ್ಯನಿರ್ವಾಹಕ ಅಭಯಂತರರು)

| ಹೆಚ್ಚುವರಿ ಅನುಕ್ರಮ ಸಂ: 1 | **ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ತಿಂಥಿಣಿಯಲ್ಲಿ "ಜೈವಿಕ ಇಂಧನ ಉದ್ಯಾನ" ಸ್ಥಾಪಿಸುವ ಕುರಿತು.** |
|---|---|

**ಠರಾವು:**

ಯಾದಗಿರಿ ಜಿಲ್ಲೆಯ ತಿಂಥಿಣಿಯಲ್ಲಿ "ಜೈವಿಕ ಇಂಧನ ಉದ್ಯಾನ" ಸ್ಥಾಪಿಸುವ ಪ್ರಸ್ತಾವನೆಗೆ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಸಂಶೋಧನಾ ನಿರ್ದೇಶಕರು)

| ಹೆಚ್ಚುವರಿ ಅನುಕ್ರಮ ಸಂ: 2 | **ಶ್ರೀ ಮಹಾದೇವ ರೆಡ್ಡಿ, ತಾಂತ್ರಿಕ ಅಧಿಕಾರಿಗಳು (ಸಹಾಯಕ ಪ್ರಾಧ್ಯಾಪಕ ವೃಂದ), ಐ.ಎ.ಎ.ಎಸ್. ಘಟಕ, ಮುಖ್ಯ ಕೃಷಿ ಸಂಶೋಧನಾ ಕೇಂದ್ರ, ರಾಯಚೂರು ಇವರ ನೇಮಕಾತಿ ವಿಷಯವನ್ನು ಕರ್ನಾಟಕ ಸರಕಾರವು ಇತ್ಯರ್ಥಪಡಿಸುವವರೆಗೆ ಸದರಿಯವರ ನೇಮಕಾತಿ ಅವಧಿಯನ್ನು ವಿಸ್ತರಿಸುವ ಕುರಿತು** |
|---|---|

**ಠರಾವು:**

ವಿಸ್ತೃತ ಚರ್ಚೆಯ ನಂತರ, ಶ್ರೀ ಮಹಾದೇವ ರೆಡ್ಡಿ, ತಾಂತ್ರಿಕ ಅಧಿಕಾರಿಗಳು (ಸಹಾಯಕ ಪ್ರಾಧ್ಯಾಪಕ ವೃಂದ), ಐ.ಎ.ಎ.ಎಸ್. ಘಟಕ, ಮುಖ್ಯ ಕೃಷಿ ಸಂಶೋಧನಾ ಕೇಂದ್ರ, ರಾಯಚೂರು ಇವರ ನೇಮಕಾತಿ ವಿಷಯವನ್ನು ಕರ್ನಾಟಕ ಸರಕಾರವು ಇತ್ಯರ್ಥಪಡಿಸುವವರೆಗೆ ಸದರಿಯವರ ನೇಮಕಾತಿ ಅವಧಿಯನ್ನು ವಿಸ್ತರಿಸಲು ಸರ್ವಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು. ಐ.ಎಂ.ಡಿ. (India Meterology Department [IMD]) ನವದೆಹಲಿಯು ಶೇಕಡ 100 ರಷ್ಟು ಯೋಜನೆಯ ಅನುದಾನ ಒದಗಿಸುತ್ತಿದ್ದುದಲ್ಲದೆ, ಶ್ರೀ ಮಹಾದೇವ ರೆಡ್ಡಿ ಅವರಿಗೆ ಎಸ್.ಇ.ಟಿ. ಪರೀಕ್ಷೆ

ಉತ್ತೀರ್ಣರಾಗುವುದರಿಂದ ವಿನಾಯಿತಿಯನ್ನು ನೀಡಲು ಸಮ್ಮತಿ ಸೂಚಿಸಿರುತ್ತದೆ. ಕರ್ನಾಟಕ ಸರಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ ಸಕಾರಾತ್ಮಕ ಸ್ಪಷ್ಟೀಕರಣ ಬಂದಲ್ಲಿ, ಸದರಿಯವರ ದೀರ್ಘಾವಧಿ ಸೇವೆಯನ್ನು ಹಾಗೂ ಎನ್.ಇ.ಟಿ. ಪರೀಕ್ಷೆಗೆ ಸಂಬಂಧಿಸಿದ ತೊಂದರೆಗಳನ್ನು ಗಮನದಲ್ಲಿಟ್ಟುಕೊಂಡು ಅವರ ಸೇವೆಯನ್ನು ಖಾಯಂ ಆಗಿ ಕ್ರಮಬದ್ಧಗೊಳಿಸಲು ಸರ್ವಾನುಮತದಿಂದ ಸಲಹೆ ನೀಡಿದರು. (ಕ್ರಮ : ಕುಲಸಚಿವರು)

| | |
|---|---|
| **ಹೆಚ್ಚುವರಿ ಅನುಕ್ರಮ ಸಂ: 3** | **ರದ್ದೇವಾಡಗಿಯ ಕೃಷಿ ಸಂಶೋಧನಾ ಕೇಂದ್ರದ ವಿಸ್ತರಣೆ, ಬಲವರ್ಧನೆ ಹಾಗೂ ಅಭಿವೃದ್ಧಿಗಾಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಕುರಿತು** |

**ಠರಾವು:**

ರದ್ದೇವಾಡಗಿಯ ಕೃಷಿ ಸಂಶೋಧನಾ ಕೇಂದ್ರದ ಸಲುವಾಗಿ 100 ಎಕರೆ ಜಮೀನನ್ನು ಭೂ–ಸ್ವಾಧೀನ ಪ್ರಕ್ರಿಯೆಯ ಮುಖಾಂತರ ಪಡೆಯಲು ಘನ ವೇದಿಕೆಯು ಅನುಮೋದನೆ ನೀಡಿತು (ಕ್ರಮ : ಸಂಶೋಧನಾ ನಿರ್ದೇಶಕರು)

| | |
|---|---|
| **ಹೆಚ್ಚುವರಿ ಅನುಕ್ರಮ ಸಂ: 4** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಪರಿಸರ ಅಧ್ಯಯನ ವಿಭಾಗವನ್ನು ಸ್ಥಾಪಿಸುವ ಕುರಿತು.** |

**ಠರಾವು:**

ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಪರಿಸರ ಅಧ್ಯಯನ ವಿಭಾಗವನ್ನು ಸ್ಥಾಪಿಸುವ ವಿಷಯಕ್ಕೆ ಘನ ವೇದಿಕೆಯು ಅನುಮೋದನೆ ನೀಡಿತು. (ಕ್ರಮ : ಕುಲಸಚಿವರು)

| | |
|---|---|
| **ಹೆಚ್ಚುವರಿ ಅನುಕ್ರಮ ಸಂ: 5** | **ಕೇಂದ್ರೀಕೃತ ಉಪಕರಣಗಳ ಸೌಲಭ್ಯವನ್ನು (Central Instrumentation Facility) ಸ್ಥಾಪಿಸುವ ಹಾಗೂ ಕಿರಿಯ ಅಭಿಯಂತರ (ಕೃಷಿ) ಹುದ್ದೆಯನ್ನು ಇನ್ಸ್ಟ್ರುಮೆಂಟೇಶನ್ ಇಂಜಿನಿಯರ್ (Instrumentation Engineer) ಎಂದು ಪರಿವರ್ತಿಸುವ ಕುರಿತು.** |

**ಠರಾವು:**

ದೀರ್ಘ ಚರ್ಚೆಯ ನಂತರ, ಕೇಂದ್ರೀಕೃತ ಉಪಕರಣಗಳ ಸೌಲಭ್ಯವನ್ನು (Central Instrumentation Facility) ಸ್ಥಾಪಿಸುವ ಹಾಗೂ ಕಿರಿಯ ಅಭಿಯಂತರ (ಕೃಷಿ) ಹುದ್ದೆಯನ್ನು ಇನ್ಸ್ಟ್ರುಮೆಂಟೇಶನ್ ಇಂಜಿನಿಯರ್ (Instrumentation Engineer) ಎಂದು ಪರಿವರ್ತಿಸುವ ವಿಷಯಕ್ಕೆ ಘನ ವೇದಿಕೆಯು ಅನುಮೋದನೆ ನೀಡಿತು. (ಕ್ರಮ : ಕುಲಸಚಿವರು)

ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸರ್ವಸದಸ್ಯರನ್ನು ದಿನಾಂಕ 30–3–2013 ರಂದು ನಡೆಯುವ ಘಟಿಕೋತ್ಸವ ಸಮಾರಂಭಕ್ಕೆ ಆಹ್ವಾನಿಸಿದರು ಹಾಗೂ ದಿನಾಂಕ 29–3–2013 ರಂದು ಏರ್ಪಡಿಸಿದ ಘಟಿಕೋತ್ಸವ ಪಥಸಂಚಲನ ಅಭ್ಯಾಸ ಕಾರ್ಯಕ್ರಮದಲ್ಲಿ ಮತ್ತು ಪದವಿಗಳನ್ನು ಪಡೆದುಕೊಂಡು ನಿರ್ಗಮಿಸುತ್ತಿರುವ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ ಚಹಾ–ಕೂಟದಲ್ಲಿ ಪಾಲ್ಗೊಳ್ಳಲು ಮಾನ್ಯ ಅಧ್ಯಕ್ಷರು ವಿನಂತಿಸಿಕೊಂಡರು.

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| ಸಹಿ /– 19–3–2013 | ಸಹಿ /– 19–3–2013 |
| **(ಬಿ.ವಿ. ಪಾಟೀಲ)** | **(ಡಿ.ಪಿ. ಬಿರಾದಾರ)** |
| ಕುಲಪತಿಗಳು ಹಾಗೂ ಅಧ್ಯಕ್ಷರು | ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ |
| ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಡಿ.ಪಿ. ಬಿರಾದಾರ)**

ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ

ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.